ಶ್ರೀ ಎಸ್. ಆರ್ ಬೊಮ್ಮಾಯಿ.—ಮಾನ್ಯ ಅಧ್ಯಕ್ಷರಲ್ಲಿ ನಾನು ಕೇಳಿಕೊಳ್ಳುತ್ತೇನೆ ದಯವಿಟ್ಟು ಈ ಪ್ರಶ್ನೆಯನ್ನು ತಡೆಹಿಡಿಯಿರಿ ಪ್ರಶ್ನೆಗೆ ಸರಿಯಾಗಿ ಉತ್ತರ ನೀಡುವುದಕ್ಕಾಗದೇ ನೋಟೀಸ್ ಬೇಕು ಎಂದು ದಯವಿಟ್ಟು ತಡೆಹಿಡಿಯುವುದು ಒಳ್ಳೆಯದು. ಬೇಕಾದರೆ ವಿಷಯಗಳನ್ನು ಚೆನ್ನಾಗಿ ತಿಳಿದು ಕೊಂಡುಬಂದು ನಾಳೆ ಹೇಳಲಿ ಕಮಿಷನರ್ ಚಂ ದ್ರಶೇರ್ತಿಯವರು ದಂಡವನ್ನು ಕಡಿಮೆ ಮಾಡಲು ಸಮರ್ಥರಲ್ಲದಿದ್ದರೂ ದಂಡವನ್ನು ಒಂದು ಲಕ್ಷ ರೂಪಾಯಿಗಳವರೆಗೆ ಕಡಿಮೆಗೊಳಿಸಿರುವುದು ನಿಜವೇ ಎಂದು ಸ್ಪಷ್ಟವಾಗಿ ಕೇಳಿದ್ದಾರೆ. ಅದಕ್ಕೆ ಉತ್ತರ ನೀಡಲು ನೋಟೀಸ್ ಬೇಕು ಎಂದರೆ ಕಷ್ಟವಾಗುತ್ತದೆ. ಮಾನ್ಯ ಮಂತ್ರಿಗಳು ಕಾಲಾವಕಾಶ ತೆಗೆದುಕೊಂಡು ನಾಳೆ ಉತ್ತರ ಹೇಳಲಿ.

MR. SPEAKER.—I withhold this question.

Employment Affirmation Scheme in Koratagere Taluk. Tumkur District.

499. SRI T. B. JAYACHANDRA (Kallambella).—Will the Minister for Finance and Planning be pleased to state.—

(a) whether it is a fact that Employment Affirmation Scheme works were undertaken in all the Village Panchayats in Koratagere Taluka in 1979 ;

(b) whether it is also a fatct that Employment Affirmation Scheme works were executed in more than one Village in every Village Panchayat in Koratagere Taluk during 1979 ;

(c) if so, the name of the village and name of work executed in each village ;

(d) the amount sanctioned to each work ;

e) amount actually spent on each work ;

(f) both cash and grain component and total amount spent in each work ;

(g) the total number of labourers employed in each work ;

(h) the total number of days each work was executed ;

(i) the average number of labourers employed per day in each work ;

SRI M. VEERAPPA MOILY (Minister for Finance and Planning),—

(a) Yes.

(b) Yes.

(c) (c) to (i) Statement laid on the table*

---

* Copy placed in the Karnataka Legislature Libray vide No. 21 Date 17th June 1980.

ಶ್ರೀ ಟಿ. ಬಿ. ಜಯಚಂದ್ರ.—ಮಾನ್ಯ ಅಧ್ಯಕ್ಷರೇ, ನಾನು ಈ ವಿಷಯದಲ್ಲಿ ಸುಮಾರು ೨೦ಕ್ಕೂ ಹೆಚ್ಚು ಪ್ರಶ್ನೆಗಳನ್ನು ಹಾಕಿದ್ದೇನೆ. ಆದರೆ ಇವತ್ತು ಅಚ್ಚಾಗಿರತಕ್ಕದ್ದು ಕೇವಲ ಮಂಜೂರನೇ ಪ್ರಶ್ನೆ, ಇಲ್ಲಿ ಬೇಕಾಗಿರತಕ್ಕ ಕೆಲವು ಅಂಕಿಅಂಶಗಳನ್ನು ಕೊಟ್ಟಿದ್ದೀರಿ. ನಮಗೆ ಮುಖ್ಯವಾಗಿ ಬೇಕಾಗಿರುವುದು ಕೊರಟಗೆರೆ ತಾಲ್ಲೂಕಿನಲ್ಲಿ ಋಣ ದುರುಪಯೋಗವಾಗಿದೆಯೇ ಇಲ್ಲವೇ ಎಂಬುದು. ಅದು ಇಲ್ಲಿ ಅಚ್ಚಾಗಿಲ್ಲ. ಇನ್ನೊಂದು ಪ್ರಶ್ನೆ ಏನೆಂದರೆ ಕೊರಟಗೆರೆ ತಾಲ್ಲೂಕಿಗೆ ಉದ್ಯೋಗ ಸ್ಥಿರೀಕರಣ ಯೋಜನೆ ಕಾಮಗಾರಿಗೆ ಎಷ್ಟು ಹಣ ಕೊಟ್ಟಿದ್ದಾರೆ ? ಎಷ್ಟು ಹಣ ಖರ್ಚಾಗಿದೆ ? ಅಲ್ಲಿ ಋಣ ದುರುಪಯೋಗ ವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ೧೯೭೮–೭೯ ಮತ್ತು ೧೯೭೯/೮೦ರ ಸಾಲಿನಲ್ಲಿ ಈ ಕೊರಟಗೆರೆ ತಾಲ್ಲೂಕಿನಲ್ಲಿ ಮಾರ್ಚ್, ಏಪ್ರಿಲ್, ಮೇ, ಜೂನ್ ೧೯೭೯ರಲ್ಲಿ ಖರ್ಚಾದಂಥ ಹಣ ೩೬,೬೬,೭೩೨ ರೂಪಾಯಿಗಳು. Cash payment Rs. 11,19,794: Food component Rs. 23,58,637 ಒಟ್ಟು ೪೭% ಐ ಟಂ ಕೆಲಸಗಳನ್ನು ಈ ತಾಲ್ಲೂಕಿನಲ್ಲಿ ತೆಗೆದುಕೊಳ್ಳಲಾಗಿದೆ. ಈ ತಾಲ್ಲೂಕಿನಲ್ಲಿ ಸ್ವಲ್ಪ ಹಣ ದುರುಪಯೋಗ ಆಗಿದೆ ಎಂದು ಕಂಡು ಬಂದಮೇಲೆ ಜಿಲ್ಲಾಧಿಕಾರಿಗಳು ಈ ಬಗ್ಗೆ ವಿಚಾರಣೆ ಮಾಡಿದ್ದಾರೆ, ವಿಚಾರಣೆ ಮಾಡಿ ಹಣ ಸ್ವಲ್ಪಮಟ್ಟಿಗೆ ದುರುಪಯೋಗವಾಗಿದೆಯೆಂದು ಕಂಡು ಬಂದುದರಿಂದ ಇಬ್ಬರು ಅಗ್ರಿಕಲ್ಚರಲ್ ಅಸಿಸ್ಟೆಂಟ್‌ಗಳನ್ನು ಸಸ್ಪೆನ್ಷನ್‌ನಲ್ಲಿ ಇಟ್ಟಿದ್ದಾರೆ. ಇದರ ಬಗ್ಗೆ ಹೆಚ್ಚಿನ ತನಿಖೆ ಮಾಡುವುದಕ್ಕೆ ಪ್ರಕರಣವನ್ನು ಸಿ.ಓ.ಡಿ.ಗೆ ಕೊಟ್ಟಿದ್ದೇವೆ.

ಶ್ರೀ ಟಿ. ಬಿ. ಜಯಚಂದ್ರ.—ಈಗ ನೀವು ಏನು ಅಂಕಿಅಂಶಗಳನು ಕೊಟ್ಟಿದ್ದೀರಿ ಇದರಲ್ಲಿ ಕಾಲಂ ೯, ೧೦, ೧೧, ಈ ಮಂಜೂರನ್ನು ಪರಿಶೀಲನೆ ಮಾಡಿ ನೋಡಿದರೆ ಎಷ್ಟು ಜನ ಕೆಲಸಗಾರರನ್ನು ತೆಗೆದು ಕೊಂಡಿದ್ದಾರೆ, ಎಷ್ಟು ಕೆಲಸವಾಗಿದೆ average member of labourers worked per day, ಇದನ್ನು ನೋಡಿದರೆ ಬಹಳ ಪೈತ್ಯಾಸಗಳು ಕಂಡುಬರುತ್ತವೆ. ೩೬ ಲಕ್ಷ ರೂಪಾಯಿ ಹಣವನ್ನು ಕೇವಲ ಒಂದು ತಿಂಗಳಲ್ಲಿ ಖರ್ಚುಮಾಡಿದ್ದಾರೆ. ಇದು ಯಾವ ಪ್ರೇರೇಪಣೆ ? ಯಾವ ದೈಹಿಕಕ್ಕೆ ಬಂದು ಕೆಲಸ ಮಾಡಿಸುವುದಕ್ಕೆ ಸಾಧ್ಯವಾಯಿತೋ ಗೊತ್ತಿಲ್ಲ. ತುಮಕೂರು ಜಿಲ್ಲೆಯ ಯಾವ ಭಾಗಕ್ಕೆ ಹೋದರೂ ಕೊರಟಗೆರೆ ತಾಲ್ಲೂಕಿನಲ್ಲಿ ಲಕ್ಷಾಂತರ ರೂಪಾಯಿ ಹಣ ದುರುಪಯೋಗ ಆಗಿದೆ ಎಂಬ ವದಂತಿ ಹಬ್ಬಿರುವುದನ್ನು ಕಾಣುತ್ತಿದ್ದೇವೆ. ಸಿ.ಓ.ಡಿ.ಗೆ ಇದನು ವಹಿಸಿದ್ದೀರಿ. ಆದರೆ ಅವರು ವಿಚಾರಣೆ ಮಾಡುವುದಕ್ಕೆ ಎಷ್ಟು ವರ್ಷಗಳು ಬೇಕಾಗುತ್ತದೋ ಗೊತ್ತಾಗುವುದಿಲ್ಲ. ಆಲ್ಲೂ ಕೂಡ ನಿಷ್ಪಕ್ಷತ ವಾದ ತನಿಖೆ ಆಗುವುದಿಲ್ಲ ಎಂಬ ಅಭಿಪ್ರಾಯ ಜನರಲ್ಲಿ ಇದೆ. ಲಕ್ಷಾಂತರ ಹಣ ಏನೇ ಆದು ಬಿ.ಡಿ.ಓ ಒಬ್ಬರಿಂದಲೇ ದುರುಪಯೋಗವಾಗಿದೆ ಎಂದು ಎಲ್ಲರೂ ಹೇಳುತ್ತಿದ್ದಾರೆ. ಆ ಬಿ.ಡಿ.ಓ. ಮೇಲೆ ಕೂರು ನೀಡಿ ಸಾಮಾನ್ಯರು ಅರ್ಜಿಗಳು ಬಂದರೂ ಹಿಂದಿನ ಸರ್ಕಾರ ಇದ್ದಾಗಲು ಕೂಡ ಯಾವ ರೀತಿಯ ಕ್ರಮವನ್ನೂ ತೆಗೆದುಕೊಂಡಿಲ್ಲ. ಇವತ್ತು ಏನಾಗಿದೆ ಯಿಂದರೆ ೧೦ ರೂಪಾಯಿ ೨೦ ರೂಪಾಯಿ ೧೦೦ ರೂಪಾಯಿ ತಿಂದಿರುವ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುತ್ತಾರೆ, ಡಿಸ್‌ಮಿಸ್ ಮಾಡುತ್ತಾರೆ, ಆದರೆ ಲಕ್ಷಾಂತರ ರೂಪಾಯಿ ತಿಂದಿರತಕ್ಕ ಆಪಾದನೆ ಇರತಕ್ಕ ಒಬ್ಬ ಬಿ.ಡಿ.ಓ ಮೇಲೆ ಯಾವ ರೀತಿಯಾದ ಕ್ರಮವನ್ನು ತೆಗೆದುಕೊಂಡಿಲ್ಲ ಹೀಗೆ ಕ್ರಮ ತೆಗೆದು ಕೊಳ್ಳದಿರುವುದನ್ನು ನೋಡಿದರೆ ನಿಜವಾಗಿಯೂ ಜನರಲ್ಲಿ ಅನುಮಾನವುಂಟಾಗುತ್ತಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಸರಿಯಾದ ಉತ್ತರವನ್ನು ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಸದಸ್ಯರು ಹೇಳಿದ ವಿಚಾರಗಳಲ್ಲಿ ಅನೇಕ ಸತ್ಯಾಂಶಗಳಿವೆ ಉದ್ಯೋಗ ಸ್ಥಿರೀಕರಣ ಯೋಜನೆಯಲ್ಲಿ ಕೆಲಸ ಇಲ್ಲದವರಿಗೆ ೧೦೦ ದಿವಸ ಕೆಲಸ ಕೊಡತಕ್ಕಂಥ ವಿಶೇಷ ಯೋಜನೆ ಮಾಡಿದ್ದೇವೆ. ಮಾನ್ಯ ಸದಸ್ಯರು ಹೇಳಿರುವ ವಿಷಯಗಳನ್ನು ನಾನು ಪರಿಶೀಲನೆ ಮಾಡುತ್ತಿದ್ದೇನೆ. ಯಾವ ಅಧಿಕಾರಿಯೇ ಆಗಿರಲಿ ತಪ್ಪು ಮಾಡಿದ್ದರೆ ಬಿಗಿ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಈಗಾಗಲೇ ಈ ವಿಚಾರದಲ್ಲಿ ಇಬ್ಬರು ಅಗ್ರಿಕಲ್ಚರಲ್ ಅಸಿಸ್ಟೆಂಟ್‌ಗಳನ್ನು ಜಿಲ್ಲಾಧಿಕಾರಿಗಳು ಸಸ್ಪೆಂಡ್ ಮಾಡಿದ್ದಾರೆ. If there is a *Prima-facie* case against the B.D.O. I will take immediate steps to keep that B.D.O. also under suspension. ದುರ್ಬಲ ವರ್ಗದವರಿಗೆ ಆಗಬೇಕಾದಂಥ ಕಾರ್ಯಕ್ರಮದಲ್ಲಿ ಈ ರೀತಿಯ ದುರುಪಯೋಗ ಆಗುವುದನ್ನು ನಾವು ಸಹಿಸುವುದಿಲ್ಲ. ೧೯೭೯ರಲ್ಲಿ ಆಗಿರುವಂಥ ಈ ದುರುಪಯೋಗದ ಬಗ್ಗೆ ಸಾಕಷ್ಟು ಬಿಗಿಯಾದ

ಕಾರ್ಯಕ್ರಮವನ್ನು ಈಗಾಗಲೇ ನಾವು ತೆಗೆದುಕೊಂಡಿದ್ದೇವೆ. ಮತ್ತು ಎಲ್ಲೆಲ್ಲಿ ದುರುಪಯೋಗ ಆಗಿದೆ ಆ ಬಗ್ಗೆ ವಿಶೇಷ ರೀತಿಯಲ್ಲಿ ತನಿಖೆ ಮಾಡಿಸಿ ಯಾರು ಯಾರು ತಪ್ಪಿತಸ್ಥರಿದ್ದಾರೆ ಅವರ ಮೇಲೆ ಬಿಗಿ ಯಾದ ಕ್ರಮವನ್ನು ಖಂಡಿತ ತೆಗೆದುಕೊಳ್ಳುತ್ತೇವೆ. ಆದೇ ಪ್ರಕಾರ ಕಂಟ್ರಾಕ್ಟರ್‌ಗಳಿಗೆ ಒಪ್ಪಿಸಿ ಕೆಲಸ ಮಾಡಿಸುತ್ತಿದ್ದರೆ ಅಂಥ ಅಧಿಕಾರಿಗಳ ಮೇಲೂ ತೀವ್ರವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ. ಆದ್ದರಿಂದ ಮಾನ್ಯ ಸದಸ್ಯರು ಎಲ್ಲೆಲ್ಲಿ ಈ ರೀತಿ ದುರುಪಯೋಗವಾಗಿದೆ ಮತ್ತು ಎಲ್ಲೆಲ್ಲಿ ಕಂಟ್ರಾಕ್ಟರು ಗಳ ಮುಖಾಂತರ ಕೆಲಸವನ್ನು ಮಾಡಿಸುತ್ತಿದ್ದಾರೆ ಎಂಬುದನ್ನು ದಯಮಾಡಿ ಸರ್ಕಾರಕ್ಕೆ ತಿಳಿಸಿದರೆ ತಕ್ಷಣ ತನಿಖೆ ಮಾಡುವುದು ಮಾತ್ರವಲ್ಲದೆ ತೀವ್ರವಾದ ಕ್ರಮವನ್ನು ಕೂಡ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ತೆಗೆದುಕೊಳ್ಳುತ್ತೇವೆ. ಈ ಬಗ್ಗೆ ಮಾನ್ಯ ಸದಸ್ಯರಿಗೆ ಯಾವ ಅನುಮಾನವೂ ಬೇಡ.

ಶ್ರೀ ಹೆಚ್.ಡಿ. ದೇವೇಗೌಡ.—೩೬ ಲಕ್ಷ ರೂಪಾಯಿಯನ್ನು ಒಂದು ತಿಂಗಳಲ್ಲಿ ಖರ್ಚು ಮಾಡಿದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆದರೆ ನೀವು ಯಾರೋ ಇಬ್ಬರು ಅಗ್ರಿಕಲ್ಚರಲ್ ಆಫಿಸ್ಸೆಂಟ್ ಗಳನ್ನ ಸಸ್ಪೆಂಡ್ ಮಾಡಿದ್ದೇವೆ ಎಂದು ಹೇಳುತ್ತೀರಿ. ಇದರ ನಿಯಂತ್ರಣಾಧಿಕಾರಿಗಳಾದ ಜಿಲ್ಲಾಧಿಕಾರಿ ಗಳು ಕೆಲಸಗಳ ಮಿದ್ದು ಪರಿಶೀಲನೆ ಮಾಡುತ್ತಿದ್ದಾರೆಯೇ? ಯಾರೋ ಒಬ್ಬ ಮೂರನೇ ದರ್ಜೆ ನೌಕರನ ಮೇಲೆ ಜವಾಬ್ದಾರಿ ಹಾಕಿ ಸುಮಾರು ಮೂವತ್ತಾರು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಾನೆಂದರೆ ಜಿಲ್ಲಾಧಿಕಾರಿಗಳು ಏನು ಕೆಲಸ ಮಾಡುತ್ತಾರೆ? ಆದುದರಿಂದ, ಜಿಲ್ಲಾಧಿಕಾರಿಗಳ ಮೇಲೆ ಈ ಕೆಲಸ ಗಳ ಜವಾಬ್ದಾರಿಯನ್ನು ಹಿಸುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ —ಮಾನ್ಯ ಅಧ್ಯಕ್ಷರೇ, ಉದ್ಯೋಗ ದೃಢೀಕರಣ ಯೋಜನೆ ಕಾರ್ಯ ಗಳಲ್ಲಿ ಸಂಬಂಧಪಟ್ಟ ಕ್ಷೇತ್ರ ವಿಸ್ತರಣಾಧಿಕಾರಿ ಮತ್ತು ಜಿಲ್ಲಾಧಿಕಾರಿಯವರು ವಿಶೇಷ ಮುತುವರ್ಜಿಮಹಿಸ ಬೇಕೆಂದು ಈಗ್ಗೆ ಒಂದು ತಿಂಗಳ ಹಿಂದೆ ಕಳುಹಿಸಿದ ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಆದರ ಪ್ರಕಾರ ನಡೆಯುತ್ತಿದೆ. ಆದುದರಿಂದ ಈ ಯೋಜನೆ ಕಾರ್ಯಗಳಲ್ಲಿ ಯಾವುದೇ ಲೋಪದೋಷಗಳಾಗಲೀ ಅಥವಾ ಹಣದ ದುರುಪಯೋಗದ ಪ್ರಕರಣವಾಗದಂತೆ ನೋಡಲಾಗುವುದು.

ಶ್ರೀ ಟಿ.ಬಿ. ಜಯಚಂದ್ರ.—ಈಗ ಹಣ ದುರುಪಯೋಗವಾಗಿರುವ ಪ್ರಕರಣವನ್ನು ಸಿ.ಓ.ಡಿ. ತನಿಖೆಗೆ ಮಹಿಸಲಾಗಿದೆ. ಅಲ್ಲಿಂದ ವರದಿಯನ್ನು ಆದಷ್ಟು ಬೇಗ ತರಿಸಿಕೊಳ್ಳಿ. ಅಲ್ಲಿಂದ ವರದಿ ಬರುವುದು ತಡವಾದರೆ, ಆಲ್ಲಿ ಏನಾಗುತ್ತದೋ ಎನ್ನುವ ಅನುಮಾನ ನಮಗೆ. ಆದುದರಿಂದ, ವಿಳಂಬ ಮಾಡದೆ ಅಲ್ಲಿಂದ ವರದಿ ತರಿಸಿ, ತಪ್ಪಿತಸ್ಥ ಅಧಿಕಾರಿಗಳನ್ನು ಸಸ್ಪೆಂಡ್ ಆಥವಾ ಡಿಸ್ಮಿಸ್ ಮಾಡುವುದರ ಜೊತೆಗೆ ದುರುಪಯೋಗ ಮಾಡಿಕೊಂಡಿರುವ ಹಣವನ್ನು ಅವರಿಂದ ವಸೂಲ್ಮಾಡಲು ಕ್ರಮ ತೆಗೆದುಕೊಳ್ಳಬೇಕು. ಇದನ್ನು ಇಷ್ಟೊಂದು ಕಳಕಳಿಯಿಂದ ಏತಕ್ಕೆ ಕೇಳಿಕೊಳ್ಳುತ್ತಿದ್ದೇನೆಂದರೆ, ಆ ಪ್ರದೇಶದ ಯಾವ ಭಾಗಕ್ಕೆ ಹೋದರೂ "ಬಿ.ಡಿ.ಒ. ಇಷ್ಟತ್ತು ಲಕ್ಷ ರೂಪಾಯಿ ತಿಂದ, ನಮ್ಮ ಸರ್ಕಾರ ಏನು ಮಾಡಿತು"? ಎಂದು ನಮ್ಮ ಪಕ್ಷದ ಕಾರ್ಯಕರ್ತರು ಕೇಳುತ್ತಾರೆ. ಅದಕ್ಕೆ ಉತ್ತರ ನಮ್ಮಲ್ಲಿಲ್ಲ. ಅಲ್ಲಿ ಲಕ್ಷಾಂತರ ರೂಪಾಯಿ ದುರುಪಯೋಪಪಾಗಿದೆ ಎನ್ನುವುದು ಗೊತ್ತಿದ್ದರೂ ಇದುವರೆವಿಗೂ ಯಾರೂ ಆತನನ್ನು ಸಸ್ಪೆಂಡ್ ಮಾಡಿಲ್ಲ; ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಬಹುಶಃ ಮಾನ್ಯ ಸಚಿವರು ನೀಡಿರುವ ಉತ್ತರ ವನ್ನೂ ಸಹ ಅದೇ ಅಧಿಕಾರಿ ತಯಾರಿಸಿ ಕಳುಹಿಸಿರಬಹುದೇನೋ!

ಅಧ್ಯಕ್ಷರು.—ಆದರ ಬಗ್ಗೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳಲಾಗುವುದೆಂದು ಮಾನ್ಯ ಸಚಿವರು ಹೇಳಿದ್ದಾರೆ. ಮತ್ತಿನ್ನೇನನ್ನು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ?

ಶ್ರೀ ಎಂ. ವೀರಪ್ಪ ಮೊಯಿಲಿ.—ಸಿ.ಓ.ಡಿ. ವರದಿಯನ್ನು ಗೃಪ ಇಲಾಖೆಗೆ ಕಳುಹಿಸಲಾಗಿದೆ. ಆದಷ್ಟು ಜಾಗ್ರತೆ ಆದನ್ನು ಪರಿಶೀಲನೆ ಮಾಡಿ ಸಂಬಂಧಪಟ್ಟವರ ಮೇಲೆ ಯಾವ ಕ್ರಮ ತೆಗೆದುಕೊಳ್ಳ ಬೇಕೋ ಆದನ್ನು ಖಂಡಿತ ತೆಗೆದುಕೊಳ್ಳಲಾಗುವುದು. ಅಧಿಕಾರಿ ಯಾವ ಹಂತದಲ್ಲೇ ಇರಲಿ we are not going to spare those officers. Ws are going to take very strict action.

SRI H.D. DEVEGOWDA.—It may not be relevant. Sir, I would like to call the attention of the Hon'ble Chief Minister to the fact that in Bihar one senior officer has been convicted. You must take action against senior officers and not against the small people.

ಶ್ರೀ ಎಸ್.ಆರ್. ಬೊಮ್ಮಾಯಿ.—ಸಿ.ಒ.ಡಿ. ವರದಿ ಬಂದಿದೆ, ಅದು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಈ ವಿಚಾರ ಪತ್ರಿಕೆಯಲ್ಲಿ ಬಂತು. ಇದರ ಬಗ್ಗೆ ಸಾರ್ವಜನಿಕ ಅಭಿಪ್ರಾಯವೂ ಬಂದ ಮೇಲೆ ಇದನ್ನು ತನಿಖೆ ಮಾಡಲಂ ಸಿ.ಒ.ಡಿ.ಯವರು ಸಾಕಷ್ಟು ಸಮಯ ತೆಗೆದುಕೊಂಡಿದ್ದಾರೆ. ಆದುದರಿಂದ, ಇದರ ಬಗ್ಗೆ ಇನ್ನು ಎಷ್ಟು ದಿವಸದಲ್ಲಿ ಕ್ರಮ ತೆಗೆದು ಕೊಳ್ಳುತ್ತೀರಿ? ಏಕೆಂದರೆ, ಒಂದಂ ಕಡೆ ಶಿಕ್ಷೆ ವಿಧಿಸಿದರೆ ಆದರ ಎಚ್ಚರ ಎಲ್ಲ ಕಡೆ ಆಗುತ್ತದೆ. ಅಲ್ಲದೆ, ಈ ಸಂದರ್ಭದಲ್ಲಿ ನಾನೊಂದು ಸಲಹೆಯನ್ನು ಕೊಡಬಯಸುತ್ತೇನೆ. ಅದೇನೆಂದರೆ, ಯಾವ ಯಾವ ತಾಲ್ಲೂಕುಗಳಲ್ಲಿ ೨೦ ಅಂಶಗಳ ಕಾರ್ಯಕ್ರಮವಾಗಲೀ ಅಥವಾ ಉದ್ಯೋಗ ದೃಢೀಕರಣ ಯೋಜನೆಯಡಿಯಲ್ಲಾಗಲೀ ತೆಗೆದುಕೊಂಡಿರುವ ಕಾರ್ಯಕ್ರಮಗಳ ಪರಿಶೀಲನೆಗಾಗಿ ಶಾಸಕರನ್ನೊಳಗೊಂಡ ಒಂದು ಸಮಿತಿಯನ್ನು ಮಾಡಿದರೆ, ಅವರು ಸ್ಥಳಕ್ಕೆ ಹೋಗಿ ಖುದ್ದು ಪರಿಶೀಲಿಸಿ ಕಾರ್ಯಕ್ರಮಗಳ ಅನುಷ್ಠಾನವನ್ನು ಗಮನಿಸಬಹುದು. ಅದಕ್ಕಾಗಿ ಅಂತಹ ಸಮಿತಿಯೊಂದನ್ನು ರಚನೆ ಮಾಡುವಿರಾ?

ಶ್ರೀ ಎಂ. ವೀರಪ್ಪ ಮೊಯಿಲಿ.—ಉದ್ಯೋಗ ದೃಢೀಕರಣ ಯೋಜನೆಯನ್ನು ೨೦ ಅಂಶಗಳ ಕಾರ್ಯಕ್ರಮದ ಒಂದು ಅಂಶವನ್ನಾಗಿ ತೆಗೆದುಕೊಳ್ಳಲಾಗಿದೆ. We will entrust this work for the supervision by the District 20 point economic programme Committee. That will again exercise the overall supervision of the implementation of the Employment Affirmation Scheme. ಈ ಬಗ್ಗೆ ಈಗಾಗಲೇ ಆದೇಶ ಕೊಡಲಾಗಿದೆ. They are required to review and supervise it. ಇನ್ನು, ಸಿ.ಒ.ಡಿ. ವರದಿ ಬಗ್ಗೆ ಇನ್ನೆಷ್ಟು ದಿವಸದಲ್ಲಿ ಕ್ರಮ ತೆಗೆದುಕೊಳ್ಳಲಾಗುವುದೆಂದು ಮಾನ್ಯ ಸದಸ್ಯರಂ ಕೇಳಿದರು. ಆದನ್ನು ಇನ್ನು ೧೫ ದಿವಸದೊಳಗೆ ಕ್ರಮ ತೆಗೆದು ಕೊಳ್ಳಲಾಗುವುದು.

ಶ್ರೀ ಕೆ.ಪೆಚ್. ಹನುಮೇಗೌಡ.—ಉದ್ಯೋಗ ದೃಢೀಕರಣ ಯೋಜನೆ ಕೆಳಗಡೆ ತೆಗೆದುಕೊಳ್ಳುವ ಕಾರ್ಯಕ್ರಮಗಳನ್ನು ಕಂಟ್ರಾಕ್ಟರುಗಳಿಗೆ ಕೊಡಬಾರದೆಂದು ಇದ್ದರೂ ಕೆಲವು ಕ್ಷೇತ್ರ ವಿಸ್ತರಣಾಧಿಕಾರಿಗಳು ಅನಧಿಕೃತವಾಗಿ ಕಂಟ್ರಾಕ್ಟರುಗಳಿಗೆ ಕೆಲಸಗಳನ್ನು ಕೊಟ್ಟಿರುತ್ತಾರೆ. ಜೊತೆಗೆ ೬೦೦-೮೦೦ ರೂಪಾಯಿಗಳ ಕೆಲಸವಾಗಿದ್ದರೆ, ಆ ಕೆಲಸಕ್ಕೆ ೭-೮ ಸಾವಿರ ರೂಪಾಯಿಗಳನ್ನು ಬಟವಾಡೆ ಮಾಡಿದ್ದಾರೆ. ಯಾರ್ಯಾರೋ ಕೈಯಲ್ಲಿ ಹೆಬ್ಬೆಟ್ಟಿನ್ನು ಒತ್ತಿಸಿಕೊಂಡು ಈ ರೀತಿ ಮಾಡಿದ್ದಾರೆ. ಇಂತಹ ಪ್ರಕರಣಗಳನ್ನು ಸರ್ಕಾರದ ಗಮನಕ್ಕೆ ತಂದರೆ ಏನು ಕ್ರಮ ಕೈಗೊಳ್ಳುತ್ತೀರಿ?

SRI M. VEERAPPA MOILY.—Unless we are vigilant about these programmes which are taking place in our constitueencies or taluks we may not be in a position to solve them. ಯಾವ ಯಾವ ತಾಲ್ಲೂಕಿನಲ್ಲಿ ಈ ರೀತಿಯ ಪ್ರಕರಣಗಳು ನಡೆಯುತ್ತಿವೆ ಎಂಬುದನ್ನು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರೆ ಅದರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

Fire accident at Sira Town

535 SRI S. LINGAIAH (Sira).—Will the Minister for Revenue and Agriculture be pleased to state:—

(a) whether it has come to their notice that 16 huts in Jothinagar of Sira Town, were burnt due to fire accident on 7-3-1980;

(b) if so, whether Compensation has been given by the Government to the affected families;

(c) if so, the details thereof ?

SRI S. BANGARAPPA (Minister for Revenue and Agriculture).—

(a) Yes.

(b) Yes.